ಪ್ರಸ್ತಾಪಿಸಿಲ್ಲ. ಸುಮಾರು 1235ರಲ್ಲಿ ಇವನು ಇದ್ದಿರಬಹುದೆಂದು ವಿದ್ವಾಂಸರು ನಿಶ್ಚಯಿಸಿದ್ದಾರೆ. ಆಂಡಯ್ಯನೆಂಬ ಶಬ್ದಾರ್ಥವೇನೋ ತಿಳಿಯುವುದಿಲ್ಲ. ಅಂಡಾಂಡಗಳನ್ನು ನಿರ್ಮಿಸಿದ ಬ್ರಹ್ಮನ ಹೆಸರಿರಬಹುದೆಂದು ತರ್ಕಿಸಬಹುದು. ಬ್ರಹ್ಮಪ್ಪ, ಬ್ರಹ್ಮಯ್ಯ ಎಂಬವು ಜೈನರು ಇಟ್ಟುಕೊಳ್ಳುವ ಹೆಸರೆಂಬುದು ಸಹ ಈ ತರ್ಕಕ್ಕೆ ಆಧಾರವಾಗುತ್ತದೆ.

ಆಂಡಯ್ಯನಿಗೆ ತನ್ನ ಕನ್ನಡನಾಡಿನ ಬಗ್ಗೆ ಅಪಾರವಾದ ಅಭಿಮಾನ, ಹೆಮ್ಮೆ, ಗೌರವ, ಆತ್ಮೀಯತೆ. ಕಾವ್ಯದ ಪ್ರಾರಂಭದಲ್ಲಿ ಕನ್ನಡನಾಡನ್ನು ಸೊಗಸಾಗಿ ವರ್ಣಿಸಿದ್ದಾನೆ. ಅವನ ಮಾತಿನಲ್ಲೇ ಅದನ್ನು ನೋಡೋಣ:

ಪಲವುಂ ನಾಲಗೆಯುಳ್ಳವಂ ಬಗೆವೊಡೆಂದುಂ ಬಣ್ಣಿಸಲ್ಕಾರನಾ
ನೆಲನಂ ಮತ್ತಿನ ಮಾನಿಸರ್ ಪೊಗಳಲೇನಂ ಬಲ್ಲರೆಂಬೊಂದು ಬ–
ಲ್ಲುಲಿಯಂ ನೆಟ್ಟನೆ ತಾಳ್ದ ಕನ್ನಡಮೆನಿಪ್ಪಾ ನಾಡು ಚೆಲ್ವಾಯ್ತು ಮೆ–
ಲ್ಲೆಲರಿಂ ಪೂತ ಕೊಳಂಗಳಿಂ ಕಾಲೂರ್ಗಳಿಂ ಕೆಯ್ಗಳಿಂ

ಹಲವು ನಾಲಗೆಗಳನ್ನುಳ್ಳ (ಎರಡು ಸಾವಿರ ನಾಲಗೆ) ಆದಿಶೇಷನೂ ಸಹ ವರ್ಣಿಸಲಾರನೆಂಬ ಹಿರಿಮೆಯನ್ನು ಪಡೆದ ಕನ್ನಡ ನಾಡನ್ನು ಒಂದು ನಾಲಗೆಯುಳ್ಳ ಮಾನವರು ಹೊಗಳಲು ಸಾಧ್ಯವಿಲ್ಲವೆಂಬ ಗರಿಮೆಯನ್ನು ಹೊಂದಿ ತಂಗಾಳಿಯಿಂದ, ಹೂತುಂಬಿದ ಕೊಳಗಳಿಂದ ಹೊಲಗದ್ದೆಗಳಿಂದ ಆ ನಾಡು ಚೆಲುವಾಗಿತ್ತು.

ಶುದ್ಧಗನ್ನಡದಲ್ಲಿನ ಕನ್ನಡ ನಾಡಿನ ವರ್ಣನೆಯಿದು:
ಇವು ಪಳ್ಳಿಗಳಿವು ಪಟ್ಟಣ
ಮಿವು ಕೆರೆಗಳಿವೆರಗಿನಿಂದ ಮುಗಿಲೋಳಿಗಳಿಂ
ತಿವು ಕಾಡಿವು ಪೆಸರ್ವಡೆದೊ
ವ್ವುವ ಬನಮೆಂದರಿದು ಪೇಳ್ವುದರಿದಾ ನಾಡೊಳ್

ಇಲ್ಲಿನ ಏಕೈಕ 'ಬನ'ವೆಂಬ ತದ್ಭವ ಶಬ್ದ (ವನ–ಸಂಸ್ಕೃತ) ಬಿಟ್ಟರೆ ಮಿಕ್ಕೆಲ್ಲ ಶಬ್ದಗಳೂ ಶುದ್ಧಗನ್ನಡದವು. ಆಂಡಯ್ಯನ ಕನ್ನಡ ಪ್ರೇಮ ಮತ್ತು ಶುದ್ಧಗನ್ನಡದ ಮೇಲಿನ ಪ್ರಭುತ್ವಕ್ಕೆ ಇಂತಹ ಪದ್ಯಗಳು ಸಾಕ್ಷಿ. ಇದೇ ರೀತಿಯ ಕನ್ನಡ ನಾಡಿನ ವರ್ಣನೆಯ ಮತ್ತೂ ಕೆಲವು ಕಂದಗಳನ್ನು ನೋಡಿ:

ಮಲ್ಲಿಗೆಯಲ್ಲದೆ ಸಂಪಿಗೆ
ಯಲ್ಲದೆ ದಾಳಿಂಬಮಲ್ಲದೊಪ್ಪುವ ಚೆಂದಂ
ಗಲ್ಲದೆ ಮಾವಲ್ಲದೆ ಕೌಂ–
ಗಲ್ಲದೆ ಗಿಡಮರಂಗಳೆಂಬುವಿಲ್ಲಾನಾಡೊಳ್

ಇಲ್ಲಿನ ಎಲ್ಲಾ ಶಬ್ದಗಳೂ ಶುದ್ಧ ಕನ್ನಡವವಾಗಿದ್ದು, ಪದ್ಯಗಳಲ್ಲಿನ ವಾಕ್ಯಗಳು ನಾವು ಇಂದು ಮಾತನಾಡುವಂತೆಯೇ ಇರುವುದು ಇಲ್ಲಿನ ವಿಶೇಷ. ಇದು 750 ವರ್ಷಗಳ ಹಿಂದಿನ ಹಳಗನ್ನಡವೆನ್ನಿಸದೇ ಇಂದಿನ ಸರಳಗನ್ನಡವಾಗಿರುವಂತೆಯೇ ತೋರುತ್ತದೆ.

ಆಂಡಯ್ಯ ಕನ್ನಡನಾಡಿನ ತೆಂಗಿನ ತೋಟಗಳ ನಿತ್ಯ ಹಸುರಿಗೆ ಸ್ವಾರಸ್ಯವಾದ ಕಾರಣವನ್ನು ನೀಡಿರುವ ಪರಿ ಇದು.